# ಮುಂಚೂಣಿ ಪ್ರಾತ್ಯಕ್ಷಿಕೆಗಳು- Frontline demonstrations

| Technology<br>ತಾಂತ್ರಿಕತೆ | No.<br>ಸಂಖ್ಯೆ | Area ( ha) / Units(No.)<br>ಕ್ಷೇತ್ರ(ಹೆ.)/ಘಟಕ(ಸಂ.) |
|---|---|---|
| ಶೇಂಗಾ ತಳಿ ಜಿಪಿಬಿಡಿ–4ರ ಜನಪ್ರಿಯಗೊಳಿಸುವಿಕೆ<br>Popularization of groundnut variety GPBD-4 | 05 | 02 |
| ಹೆಚ್ಚು ಇಳುವರಿ ನೀಡುವ ಸೋಯಾಅವರೆ ತಳಿ ಜೆ.ಎಸ್. 335 ಜನಪ್ರಿಯಗೊಳಿಸುವಿಕೆ<br>Promotion of high yielding soybean variety JS-335 | 12 | 05 |
| ಸೂರ್ಯಕಾಂತಿಯ ಹೈಬ್ರೀಡ್ ಕೆಬಿಎಸ್‌ಹೆಚ್–44 ರ ಸಮಗ್ರ ಬೆಳೆ ನಿರ್ವಹಣೆ<br>Integrated crop management of sunflower hybrid KBSH-44 | 05 | 02 |
| ಎಳ್ಳಿನ ಕಡಿಮೆ ಅವಧಿಯ ತಳಿ ಡಿಎಸ್‌ಎಸ್ 9 ರ ಜನಪ್ರಿಯಗೊಳಿಸುವಿಕೆ<br>Popularization of short duration variety of sesamum DSS-9 | 12 | 05 |
| ತೊಗರಿ ತಳಿ ಬಿಎಸ್.ಎಂಆರ್ 736ರ ಜನಪ್ರಿಯಗೊಳಿಸುವಿಕೆ<br>Promotion of high yielding variety of redgram BSMR-736 | 12 | 05 |
| ಹೆಸರು ಬೆಳೆಯ ತಳಿ ಎಸ್–4ರ ಜನಪ್ರಿಯಗೊಳಿಸುವಿಕೆ<br>Popularization of green gram variety S-4 | 10 | 04 |
| ಉದ್ದಿನ ಬೆಳೆಯ ತಳಿ ಡಿ.ಯು–1ರ ಜನಪ್ರಿಯಗೊಳಿಸುವಿಕೆ<br>Popularization of black gram variety DU-1 | 05 | 02 |
| ಸಾವೆಯ ಸುಕ್ಷೇಮ ತಳಿಯ ಸಮಗ್ರ ಬೆಳೆ ನಿರ್ವಹಣೆ<br>Integrated crop management of little millet variety Sukshema | 12 | 5 |
| ನವಣೆಯ ಹೆಚ್‌ಎಂಟಿ 100–1 ತಳಿಯ ಸಮಗ್ರ ಬೆಳೆ ನಿರ್ವಹಣೆ<br>Integrated crop management of foxtail millet variety HMT-100-1 | 12 | 5 |
| ಮೇವಿನ ಬೆಳೆ ನೇಪಿಯರ್‌ನ ಕೊ–4 ತಳಿಯ ಪರಿಚಯ<br>Introduction of CO-4 variety of fodder crop hybrid napier | 10 | 01 |
| ಹೈನುಗಾರಿಕಾ ಹಸುಗಳಲ್ಲಿ ಅಜೋಲ್ಲಾ ಹಾಗೂ ಪೌಷ್ಟೀಕರಿಸಿದ ಒಣಮೇವಿನ ಬಳಕೆ<br>Use of azolla and enriched dry fodder in dairy animals | 20 | - |
| ಹೈನುಗಾರಿಕಾ ಹಸುಗಳಲ್ಲಿ ಅನ್ನಪೂರ್ಣ ಖನಿಜ ಮಿಶ್ರಣದ ಜನಪ್ರಿಯಗೊಳಿಸುವಿಕೆ<br>Popularization of Annapurna mineral mixture in dairy animals | 10 | - |
| ಪರಿಸರ ಸ್ನೇಹಿ ಒಲೆಯ ಬಳಕೆ<br>Use of Envirofit chulah | 05 | - |
| ಮಾವಿನ ಹಣ್ಣಿನ ಕೊಯ್ಲಿಗಾಗಿ ಬಲೆಯ ಬಳಕೆ<br>Mango harvester | 10 | - |
| ಹುಣಸೆ ಹಣ್ಣಿನ ಬೀಜ ಹಾಗೂ ತಿರುಳು ಬೇರ್ಪಡಿಸುವ ಯಂತ್ರದ ಬಳಕೆ<br>Tamarind dehuller-cum-deseeder | 1 | - |
| ದ್ವಿದಳ ಧಾನ್ಯಗಳ ವೈಜ್ಞಾನಿಕ ಸಂಗ್ರಹಣೆ<br>Pulse storage | 05 | - |

**ಆಂತರಿಕ ಪ್ರಸಾರಕ್ಕಾಗಿ ಮಾತ್ರ**

ಮುದ್ರಿತ ವಿಷಯ

ಗೆ,

ಪಿನ್ ಕೋಡ್


ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ॥ ರಾಣೇಬೆನ್ನೂರು, ಜಿ॥ ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)



ಸಂಪಾದಕರು : ಶ್ರೀಮತಿ ಗೀತಾ ಕಳಕನವರ್
ಪ್ರಕಾಶಕರು : ಡಾ. ಎಂ.ವಿ. ನಾಗರಾಜ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಹ ಸಂಪಾದಕರು :
ಡಾ. ಟಿ.ಎಂ. ಸೌಮ್ಯ, ಡಾ. ಕೆ. ಬಿ. ಯಡಹಳ್ಳಿ, ಡಾ. ಬಿ. ಸಿ. ಹನುಮಂತಸ್ವಾಮಿ,
ಡಾ. ಎಸ್. ವೈ. ಮುಕರ್ತಾಳ, ಶ್ರೀ ಎಂ.ಎ. ಗದ್ದನಕೇರಿ
ವಿನ್ಯಾಸ : ಕು. ರೇಖಾ ಕೆ.ಎನ್., ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ
ಛಾಯಾಗ್ರಹಣ : ಶ್ರೀ ಮಹೇಶ ಎಲ್. ಎಂ.





ಕೃಷಿ ವಿಶ್ವವಿದ್ಯಾಲಯ, ಧಾರವಾಡ


# ವಾರ್ತಾ ಪತ್ರಿಕೆ


ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org Email:kvk_haveri@rediffmail.com

ಜನೇವರಿ–ಜೂನ್ 2011 ಸಂಪುಟ–10 ಸಂಚಿಕೆ–1


## ವೈಜ್ಞಾನಿಕ ಸಲಹಾ ಸಮಿತಿ ಸಭೆ –Scientific Advisory Committee Meeting



ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ 33ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ದಿನಾಂಕ 21.03.2011 ರಂದು ಕೇಂದ್ರದ ಆವರಣದಲ್ಲಿ ನಡೆಯಿತು. ವಿಸ್ತರಣಾ ನಿರ್ದೇಶಕರಾದ ಡಾ. ಎಲ್. ಕೃಷ್ಣಾ ನಾಯಕ್, ವಲಯ ಯೋಜನಾ ನಿರ್ದೇಶಕರಾದ ಡಾ. ಎಸ್. ಪ್ರಭುಕುಮಾರ್, ಸಹ ವಿಸ್ತರಣಾ ನಿರ್ದೇಶಕರಾದ ಡಾ. ಎಸ್.ಟಿ. ನಾಯಕ್, ವಿವಿಧ ಅಭಿವೃದ್ಧಿ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಲಹಾ ಸಮಿತಿಯ ಸದಸ್ಯರು ಸಭೆಗೆ ಹಾಜರಿದ್ದರು. ಕೇಂದ್ರದ ಕಾರ್ಯಚಟುವಟಿಕೆಗಳ ಪಕ್ಷಿ ನೋಟವನ್ನು ಹಾಜರಿದ್ದ ಸದಸ್ಯರಿಗೆ ಮಂಡಿಸಲಾಯಿತು ಹಾಗೂ ಅಧಿಕಾರಿಗಳಿಂದ ಬಂದ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಯಿತು.

33rd Scientific Advisory Committee Meeting was organized on 21.03.2011 at Krishi Vigyan Kendra, Hanumanamatti. The Director of Extension Dr. L. Krishna Nayak, Zonal Project Director Dr. S. Prabhukumar, Associate Director of Extension Dr. S.T. Nayak, district level Officers from different developmental departments and members of the committee were present in the meeting. Overview of the activities were presented and the suggestions were accepted.

## ಕ್ಷೇತ್ರೋತ್ಸವ –Field day







ತೊಗರಿ ಬೆಳೆಯ ಗೊಡ್ಡು ರೋಗ ನಿರೋಧಕ ತಳಿಯಾದ ಬಿ.ಎಸ್.ಎಂ.ಆರ್. -736 ನ ಕ್ಷೇತ್ರೋತ್ಸವವನ್ನು ದಿನಾಂಕ 10.01.2011 ರಂದು ಕೇಂದ್ರದ ಆವರಣದಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಮುಖ್ಯ ಅದಿತಿಗಳಾದ ರಾಣೇಬೆನ್ನೂರು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ. ಎಲ್. ಅಜಗಣ್ಣನವರ್ ರವರು ತಳಿಯ ಗುಣ ವಿಶೇಷತೆಗಳ ಬಗ್ಗೆ ರೈತರಿಗೆ ತಿಳಿಸಿದರು. ಕೃಷಿ ವಿಶ್ವ ವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ. ಪಿ.ಎಂ. ಸಾಲಿಮಠ ಹಾಗೂ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಎಸ್.ಟಿ. ನಾಯಕ್‌ರವರು ಸಹ ಹಾಜರಿದ್ದರು. ಕ್ಷೇತ್ರೋತ್ಸವದಲ್ಲಿ ಬಿತ್ತನೆ, ಕೈಗಾಳು ಹಾಗೂ ನಾಟಿ ಪದ್ಧತಿಯ ಮುಖಾಂತರ ಬೆಳೆದ ತೊಗರಿ ಬೆಳೆಯ ಕ್ಷೇತ್ರ ಭೇಟಿ ಮಾಡಿಸಲಾಯಿತು.

**A field day on Sterility mosaic virus resistant variety of redgram BSMR-736 was organized on 10.01.2011 in the KVK instructional farm. Assistant Director of Agriculture, Ranebennur Sri. L. Ajagannavar briefed the important characteristics of the variety. Field day was organized in the leadership of Dr. P.M. Salimath, Director of Research, UAS, Dharwad and Dr. S.T. Nayak, Associate Director of Extension, UAS, Dhawad. Demonstration plots with sowing, dibbling and transplanting techniques of redgram cultivation were visited by the farmers.**

## ತರಬೇತಿ -Training





ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯವತಿಯಿಂದ ರಾಣೇಬೆನ್ನೂರಿನ ಜ್ಞಾನ ವಿಕಾಸ ಯೋಜನೆಯ ಮಹಿಳಾ ಸಂಯೋಜಕಿಯರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.03.2011 ರಂದು ಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಗ್ರಾಮೀಣ ಮಹಿಳೆಯರಿಗೆ ಲಭ್ಯವಿರುವ ಶ್ರಮ ಕಡಿಮೆಗೊಳಿಸುವ ತಾಂತ್ರಿಕತೆಗಳಾದ ಹರಿತ ಅಂಚಿನ ಕುಡುಗೋಲು, ಶೇಂಗಾ ಒಡೆಯುವ ಯಂತ್ರ, ಪರಿಸರ ಸ್ನೇಹಿ ಒಲೆ ಮುಂತಾದವುಗಳ ಬಗ್ಗೆ ಪರಿಚಯ ಹಾಗೂ ಬಳಕೆಯ ಪ್ರಾಯೋಗಿಕ ಅನುಭವಗಳನ್ನು ನೀಡಲಾಯಿತು. ಸಂಯೋಜಕಿಯರು ಗ್ರಾಮೀಣ ಮಟ್ಟದಲ್ಲಿ ಕಾರ್ಯ ನಿರ್ವಹಿಸುವುದರಿಂದ ಗ್ರಾಮೀಣ ಮಹಿಳೆಯರಿಗೆ ಸಂಯೋಜಕಿಯರ ಮುಖಾಂತರ ಈ ತಾಂತ್ರಿಕತೆಗಳ ಅರಿವು ಮೂಡಿಸುವ ಪ್ರಯತ್ನ ಇದರ ಉದ್ದೇಶವಾಗಿತ್ತು.

**One day training was organized for the Jnyana Vikas Yojane Co-ordinators of Sri Kshetra Dharmasthala Grameenabhivruddhi Samsthe, Ranebennur on 30.03.2011. Different drudgery reducing technologies *viz.*, use of serrated sickle, groundnut decorticator, envirofit chulah were demonstrated and practicals were conducted. Creating awareness among the rural women about these technologies through Jnyana Vikasa Yojana Co-ordinators was the main motto of the training programme.**

## ವಸ್ತು ಪ್ರದರ್ಶನ – Exhibition





ಹಾವೇರಿ ಜಿಲ್ಲೆಯ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಲಾದ ವೃತ್ತಿ ಶಿಕ್ಷಕರ ವಾರ್ಷಿಕ ಸಮ್ಮೇಳನದ ಅಂಗವಾಗಿ ರಾಣೇಬೆನ್ನೂರಿನ ಉರ್ದು ಶಾಲೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಕಾರ್ಯಚಟುವಟಿಕೆಗಳು ಹಾಗು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಬಗ್ಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಇದರ ಉಪಯೋಗವನ್ನು ಜಿಲ್ಲೆಯ ಎಲ್ಲ ಶಿಕ್ಷಕರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಡೆದುಕೊಂಡರು.

**An exhibition was arranged by Krishi Vigyan Kendra, Hanumanamatti at Urdu High School ground, Ranebennur on the occasion of Haveri district teachers annual meet organized by Department of Education. Various new technologies in the field of agriculture and allied areas were exhibited. Teachers and students of Haveri district reaped the benefit of the exhibition.**

## ಭೂ ಚೇತನ ರೈತ ಅನುವುಗಾರರ ತರಬೇತಿ -Bhoo chetana Training





ಭೂ ಚೇತನ ಕಾರ್ಯಕ್ರಮದಡಿ ಕೆಲಸ ನಿರ್ವಹಿಸುತ್ತಿರುವ ಹಾವೇರಿ ಜಿಲ್ಲೆಯ ರೈತ ಅನುವುಗಾರರಿಗೆ ಕೃಷಿ ಹಾಗೂ ಕೃಷಿಯೇತರ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಾಗೂ ಪ್ರಾಯೋಗಿಕ ಅನುಭವ ನೀಡುವ ಉದ್ದೇಶದಿಂದ 03 ತಂಡಗಳಲ್ಲಿ ಹಿರೇಕೆರೂರು, ರಾಣೇಬೆನ್ನೂರು ಹಾಗೂ ಹಾನಗಲ್ ತಾಲ್ಲೂಕಿನ ರೈತ ಅನುವುಗಾರರಿಗೆ 05 ದಿನಗಳ ತರಬೇತಿಗಳನ್ನು ನಡೆಸಲಾಯಿತು. ದಿ. 18.04.2011 ರಿಂದ 23.04.2011 ರವರೆಗೆ ಹಿರೇಕೆರೂರಿನ 40 ರೈತ ಅನುವುಗಾರರಿಗೆ, ದಿ :02.05.2011 ರಿಂದ ದಿ. 07.05.2011 ರವರೆಗೆ ರಾಣೇಬೆನ್ನೂರಿನ 41 ರೈತ ಅನುವುಗಾರರಿಗೆ ಹಾಗೂ ದಿ : 23.05.2011 ರಿಂದ ದಿ. 28.05.2011 ರವರೆಗೆ ಹಿರೇಕೆರೂರು ಹಾಗೂ ಹಾನಗಲ್ ತಾಲ್ಲೂಕಿನ 30 ರೈತ ಅನುವುಗಾರರಿಗೆ ಸುಧಾರಿತ ಬೇಸಾಯ ಕ್ರಮಗಳು, ಮಣ್ಣು ಪರೀಕ್ಷೆ, ಲಘು ಪೋಷಕಾಂಶಗಳ ಮಹತ್ವ ಸಸ್ಯರೋಗ ಹಾಗೂ ಕೀಟಗಳ ನಿರ್ವಹಣೆ, ಪಶುಸಂಗೋಪನೆ, ಆದಾಯೋತ್ಪನ್ನ ಚಟುವಟಿಕೆಗಳು ಇತ್ಯಾದಿ ವಿಷಯಗಳ ಕುರಿತು ತರಬೇತಿ ನೀಡಲಾಯಿತು.

A five days training programme related to agriculture and allied areas was conducted to the farmer facilitators of Hirekerur, Ranebennur and Hanagal taluk under Bhoo chetana programme in 3 batches. Theoretical and practical experiences related to advanced agronomic practices, importance of soil and water testing, importance of micro nutrients, management of crop pests and diseases, animal husbandry, income generating activities were given during the trainings conducted from 18.04.2011 to 23.04.2011 for 40 facilitators of Hirekerur taluk, from 02.05.2011 to 07.05.2011 for 41 facilitators of Ranebennur and from 23.05.2011 to 28.05.2011 for 30 facilitators of Hirekerur and Hanagal taluks.

## QUINQUENNIAL REVIEW TEAM VISIT TO KVK HAVERI






